**OS 11/2019**
**PW1**

ದಿನಾಂಕ:18.12.2025 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನ ಭೋಧಿಸಲಾಯಿತು.

<u>ಪಾಟೀ ಸವಾಲುಃ **6**ನೇ ಪ್ರತಿವಾದಿ ಪರ ಶ್ರೀ ಹೆಚ್ ಕೆ ವಕೀಲರಿಂದಃ</u>

ನಾನು 7ನೇ ತರಗತಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಮತ್ತು ಇಂಗ್ಲಿಷ್ ಓದಲು ಸ್ವಲ್ಪ ಸ್ವಲ್ಪ ಬರುತ್ತದೆ. ನಿಮಗೆ ವ್ಯವಹಾರ ಜ್ಞಾನ ಚೆನ್ನಾಗಿದೆ ಎಂದರೆ ಸ್ವಲ್ಪ ಸ್ವಲ್ಪ. ನಾನು ಬೆಂಗಳೂರಿನಲ್ಲಿ ವಾಸ ಇದ್ದೇನೆ. ದಾವಾ ಸ್ವತ್ತು ಮನೆ ಆಗಿದ್ದು ಚನ್ನಪಟ್ಟಣದಲ್ಲಿ ಇರುತ್ತದೆ. ದಾವಾ ಸ್ವತ್ತು ಅಲ್ಲದೆ ಬೇರೆ ಯಾವುದಾದರೂ ಸ್ವತ್ತನ್ನು ಖರೀದಿ ಮಾಡಿದ್ದೀರ ಎಂದರೆ ಇಲ್ಲ. ಕರಾರು ಪತ್ರ ಆಗುವ ಪೂರ್ವದಲ್ಲಿ ದಾವಾ ಸ್ವತ್ತು ಮಾರಾಟಕ್ಕೆ ಇದೆ ಎಂದು ನಿಮಗೆ ಯಾರು ತಿಳಿಸಿದ್ದರೆ ಎಂದರೆ ಸಾಕ್ಷಿ ನನ್ನ ತಂಗಿ ತಿಳಿಸಿದ್ದಾರೆ ಎಂದು ಹೇಳುತ್ತಾರೆ. ಕರಾರು ಆಗುವ ಒಂದು ತಿಂಗಳ ಪೂರ್ವದಲ್ಲಿ ಮಾತುಕತೆ ಆಗಿರುತ್ತದೆ. ಮಾತುಕತೆಯು ದಾವಾ ಸ್ವತ್ತಿನಲ್ಲಿ ಆಗಿರುತ್ತದೆ. ಮಾತುಕತೆಗೆ ಯಾರು ಯಾರು ಹಾಜರಿದ್ದರು ಎಂದರೇ ಸಾಕ್ಷಿ ನಾನು ನನ್ನ ತಂಗಿ, ನನ್ನ ತಂದೆ, 1ನೇ ಪ್ರತಿವಾದಿ ಮತ್ತು ಅವರ ತಾಯಿ ಹಾಗೂ 6ನೇ ಪ್ರತಿವಾದಿ ಹಾಜರಿದ್ದರು. ಅವರ ಹೆಸರು ಏನು ಎಂದರೇ ನೆನಪಿಲ್ಲ ಮರೆತು ಹೋಗಿದೆ. ಅವರ ತಾಯಿಯನ್ನು ಪಕ್ಷಕಾರರಾಗಿ ಮಾಡಿದ್ದೀರ ಎಂದರೇ ಇಲ್ಲ. ಸಾಕ್ಷಿ ಮುಂದುವರೆದು ವಂಶವೃಕ್ಷದಲ್ಲಿ ಇರಲಿಲ್ಲ ಎಂದು ಹೇಳುತ್ತಾರೆ.

ವ್ಯಾಪಾರವನ್ನು ಯಾರ ಹತ್ತಿರ ಮಾಡಿದ್ದೀರ ಎಂದರೇ ಸಾಕ್ಷಿ 1 ಮತ್ತು 6 ನೇ ಪ್ರತಿವಾದಿ ಮತ್ತು ಅವರ ತಾಯಿ ಜೊತೆ ಮಾಡಿದ್ದೀವಿ ಎಂದು ಹೇಳುತ್ತಾರೆ. ದಾವಾ ಸ್ವತ್ತನ್ನು ವ್ಯಾಪಾರ ಮಾಡುವ ಮುಂಚೆ ಯಾವ ಯಾವ ದಾಖಲೆಗಳನ್ನು ನೋಡಿದ್ದೀರ ಎಂದರೆ ಸಾಕ್ಷಿ ಕ್ರಯಪತ್ರ, ಮಂಚೂರಾತಿ ಪತ್ರ, ಟ್ಯಾಕ್ಸ್ ರಶೀದಿ, ಖಾತಾ ವನ್ನು ನೋಡಿದ್ದೇನೆ. ಕ್ರಯ ಪತ್ರ ಯಾರಿಂದ ಯಾರಿಗೆ ಆಗಿತ್ತು ಎಂದರೇ ಸಾಕ್ಷಿ ಮೂಲ ಮಾಲೀಕರಿಂದ ಅವರ ತಂದೆಗೆ ಆಗಿತ್ತು ಎಂದು ಹೇಳುತ್ತಾರೆ. ಮಂಚೂರಾತಿ ಯಾರ ಹೆಸರಿಗೆ ಆಗಿತ್ತು ಎಂದರೇ ಗೊತ್ತಿಲ್ಲ. ಖಾತೆ ಯಾರ ಹೆಸರಿನಲ್ಲಿತ್ತು ಎಂದರೇ ಅವರ ತಂದೆ

ಹೆಸರಿನಲ್ಲಿತ್ತು. ಅವರ ತಂದೆ ಹೆಸರು ಎಂದರೆ ಸಾಕ್ಷಿ ಮೊದಲು ಗೊತ್ತಿಲ್ಲ ಎಂದು ಹೇಳಿ ನಂತರ ರಾಮಯ್ಯ ಎಂದು ಹೇಳುತ್ತಾರೆ. ಅವರಿಗೆ ಎಷ್ಟು ಜನ ಮಕ್ಕಳು ಎಂದರೇ 3 ಜನ ಗಂಡು ಮಕ್ಕಳು ಮತ್ತು ನನಗೆ ಗೊತ್ತಿರುವಾಗೇ ಒಂದು ಹೆಣ್ಣು. ವಂಶವೃಕ್ಷದಲ್ಲಿ ಅವರು ಎಲ್ಲಾರು ಇದ್ದಾರೆ ಎಂದರೇ ಸಾಕ್ಷಿ ಅದಕ್ಕಿಂತ ಜಾಸ್ತಿ ಜನ ಇದ್ದಾರೆ ಎಂದು ಹೇಳುತ್ತಾರೆ.

ತಂದೆ ಮರಣ ಹೊಂದಿದ್ದ ಬಳಿಕ ಅವರ ಹೆಂಡತಿ ಮತ್ತು ಮಕ್ಕಳಿಗೆ ಹಕ್ಕು ಇದೆ ಎಂದರೇ ಹೌದು. ಕರಾರು ಎಲ್ಲಿ ತಯಾರು ಮಾಡಿದ್ದರೆ ಎಂದರೆ ಬೆಂಗಳೂರಿನಲ್ಲಿ ವಕೀಲರಾದ ಶ್ರೀ. ಮುಂಕುಂದ ಅವರ ಕಚೇರಿಯಲ್ಲಿ ಮಾಡಿದ್ದಾರೆ. ವಕೀಲರ ಕಚೇರಿಗೆ ಎಲ್ಲಾರು ಬಂದಿದ್ದಾರ ಎಂದರೆ ಹೌದು. ಕರಾರು ಪತ್ರ ಯಾವ ಭಾಷೆ ಯಲ್ಲಿ ಇದೆ ಎಂದರೇ ಇಂಗ್ಲೀಷ್ ಭಾಷೆಯಲ್ಲಿದೆ. ಕರಾರು ಪತ್ರಕ್ಕೆ ಎಲ್ಲಾರು ಸಹಿ ಮಾಡಿದ್ದಾರ ಎಂದರೇ ಸಾಕ್ಷಿ 6ನೇ ಪ್ರತಿವಾದಿ ಮಾತ್ರ ಮಾಡಿದ್ದಾರೆ ಎಂದು ಹೇಳುತ್ತಾರೆ. ಎಲ್ಲಾರು 6ನೇ ಪ್ರತಿವಾದಿಗೆ ಜಿ ಪಿ ಎ ನೀಡಿದ್ದಾರೆ ಎಂದರೇ ಹೌದು. ಆ ಜಿ ಪಿ ಎ ನಿಮಗೆ ಕೊಟ್ಟಿದಾರೆ ಎಂದರೇ ಇಲ್ಲ. ಆ ಜಿ ಪಿ ಎ ಯನ್ನು ನೋಡಿದ್ದೀರ ಎಂದರೇ ಹೌದು. ಜಿ ಪಿ ಎ ಹೋಡ್ಡಾರ್ ಆಗಿ ಕರಾರು ಪತ್ರ ಬಟೆದುಕೊಟ್ಟಿದ್ದಾರೆಂದು ನಿಮ್ಮ ಕರಾರಿನಲ್ಲಿ ಇದೆ ಎಂದರೇ ಹೌದು. 1 ಮತ್ತು 6 ನೇ ಪ್ರತಿವಾದಿಯ ತಾಯಿ ಆದಿನ ಹಾಜರಿದ್ದರು ಎಂದು ತಿಳಿಸಿದ್ದು ಅವರ ಸಹಿಯನ್ನು ಯಾಕೆ ಪಡೆದಿಲ್ಲ ಎಂದರೆ ಸಾಕ್ಷಿ ಕ್ರಯಪತ್ರ ನೋಂದಾಣಿ ಮಾಡುವಾಗ ಬರುತ್ತೇವೆ ಎಂದು ಹೇಳಿದ್ದರು ಜಿ ಪಿ ಎ ನೀಡಿದ ಕಾರಣ ಅವರ ಸಹಿ ಅವಶ್ಯಕತೆ ಇಲ್ಲ ಎಂದು ಪಡೆದಿರುವುದಿಲ್ಲ. ಸ್ವಾಧೀನ ವನ್ನು ಕೊಟ್ಟಿದ್ದಾರ ಎಂದರೆ ಇಲ್ಲ.

ನಿಮಗೆ ಪ್ರತಿವಾದಿಯವರು ಯಾವುದೇ ಕ್ರಯಕರಾರು ಪತ್ರವನ್ನು ಬರೆದುಕೊಟ್ಟಿಲ್ಲ ಎಂದರೇ ಸುಳ್ಳು. ಒಂದು ವೇಳೆ ಕ್ರಯಕರಾರರು ಪತ್ರವನ್ನು ಬರೆದುಕೊಟ್ಟಿದ್ದಾರೆ ಎಲ್ಲಾ ಪ್ರತಿವಾದಿಗಳು ಬಂದು ಸಹಿ ಮಾಡಿಕೊಂಡುತ್ತಿದ್ದರು ಎಂದರೆ ಸುಳ್ಳು. ಪ್ರತಿವಾದಿಯವರು 6ನೇ ಪ್ರತಿವಾದಿಗೆ ಯಾವುದೇ ಜಿ ಪಿ ಎ ಬರೆದುಕೊಟ್ಟಿಲ್ಲ ಎಂದರೆ ಸಾಕ್ಷಿ ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ನೀವು ಹಾಜರು ಪಡಿಸಿದ ಎಲ್ಲಾ ದಾಖಲೆಗಳನ್ನು ನಿಮಗೆ ಯಾರು ನೀಡಿದ್ದರೇ ಎಂದರೇ ಸಾಕ್ಷಿ 6ನೇ ಪ್ರತಿವಾದಿ ಅವರ ಅಣ್ಣ

ಮತ್ತು ತಾಯಿ ನೀಡಿದ್ದಾರೆ ಎಂದು ಹೇಳುತ್ತಾರೆ. ಆ ದಾಖಲೆಗಳನ್ನು ಪಡೆಯುವಾಗ ಜಿ ಪಿ ಎ ಅನ್ನು ಯಾವ ಕಾರಣಕ್ಕೆ ಪಡೆದಿಲ್ಲ ಎಂದರೇ ಸಾಕ್ಷಿ ತಾಯಿಯ ಹೆಸರಿಗೆ ಖಾತೆ ಬದಲಾವಣೆ ಮಾಡಲು ರೆವಿನ್ಯೂ ಕಚೇರಿಗೆ ನೀಡಬೇಕೆಂದು ಎಂದು ತೆಗೆದುಕೊಂಡು ಹೋಗಿರುತ್ತಾರೆ.

ಸಾಮಾನ್ಯವಾಗಿ ಸ್ವತ್ತನ್ನು ಖರೀದಿ ಮಾಡಬೇಕಾದರೆ ಖಾತೆ ಯಾರ ಹೆಸರಿನಲ್ಲಿ ಇರುತ್ತದೆ ಅವರು ಕ್ರಯ ಕರಾರು ಮಾಡಿಕೊಂಡುತ್ತಾರೆಂದರೇ ಹೌದು. ಆದರೆ ಅವರ ತಂದೆ ಮರಣ ಹೊಂದಿದ್ದ ಕಾರಣ ಅವರ ಹೆಂಡತಿ ಮತ್ತು ಮಕ್ಕಳು ಖಾತೆಯನ್ನು ಬದಲಾವಣೆ ಮಾಡಿಕೊಂಡು ನೋಂದಾಣಿ ಮಾಡಿಕೊಡುತ್ತೇವೆ ಎಂದು ಹೇಳಿದ್ದರು. ನೀವು ಹಾಜರುಪಡಿಸಿದ ದಾಖಲೆಗಳು ಕರಾರು ಆಗುವ ಸಂದರ್ಭದಲ್ಲಿ ನೀಡಿದ ದಾಖಲೆಗಳು ಎಂದರೇ ಹೌದು ಪುನಃ ಯಾವುದೇ ಹೊಸ ದಾಖಲೇಗಳನ್ನು ಹಾಜರುಪಡಿಸಿಲ್ಲ ಎಂದರೆ ಹೌದು. ಕ್ರಯದ ಕರಾರು ಬರೆಸಿಕೊಳ್ಳುವ ಕಾಲಕ್ಕೆ ದಾವಾ ಸ್ವತ್ತಿನ ಖಾತೆ 1 ಮತ್ತು 6ನೇ ಪ್ರತಿವಾದಿಯ ತಾಯಿಯ ಹೆಸರಿನಲ್ಲಿ ಇತ್ತು ಎಂದರೇ ಸುಳ್ಳು. ದಾವಾ ಸ್ವತ್ತಿನ ಡೋರ್ ನಂ 9 ಆಗಿರುತ್ತದೆ ಸಂಪೂರ್ಣ ಡೋರ್ ನಂಬರ್ ಗೊತ್ತಾ ಎಂದರೇ ಸಾಕ್ಷಿ-9 ಎಂದು ಹೇಳುತ್ತಾರೆ. ಸಾಕ್ಷಿ ನಿಪಿ-11 ನ್ನು ತೋರಿಸಿ ಅದರಲ್ಲಿನ ಹೆಸರನ್ನು ಕೇಳಲಾಗಿ ಲಕ್ಷಮ್ಮ ಕೋಂ ಚಾಮಯ್ಯ ಎಂದು ಇರುತ್ತದೆ ಎಂದು ಹೇಳುತ್ತಾರೆ. ನಿಪಿ-12, 2014 ರ ಸಾಲಿನದು ಎಂದರೇ ಹೌದು. 2014ರಲ್ಲಿನ ಖಾತೆ 1 ಮತ್ತು 6ನೇ ಪ್ರತಿವಾದಿಯ ತಾಯಿಯ ಹೆಸರಿನಲ್ಲಿತ್ತು ಎಂದರೆ ಸುಳ್ಳು. ಅವರ ತಾಯಿಯ ಹೆಸರಿನಲ್ಲಿ ಖಾತೆ ಇದ್ದ ಕಾರಣ ಹೇಗಾದರೂ ಮಾಡಿ ದಾವಾ ಸ್ವತ್ತುನ್ನು ಕಬಳಿಸುವ ಉದ್ದೇಶದಿಂದ ಕ್ರಯಕರಾರು ಪತ್ರವನ್ನು ಸೃಷ್ಟಿ ಮಾಡಿದ್ದರೆ ಎಂದರೆ ಸುಳ್ಳು ಸಂತೋಷ್ ಸಹ ಸಹಿ ಮಾಡಿದ್ದಾರೆ. ಅವರ ತಾಯಿ ಬದುಕಿದ್ದಾರೆ ಎಂದರೆ ಹೌದು. ಅವರನ್ನು ಈ ದಾವೆಯಲ್ಲಿ ಪಕ್ಷಗಾರನ್ನಾಗಿ ಮಾಡಲು ತೊಂದರೆ ಇದೆ ಎಂದರೇ ಹೌದು. ಏಕೆ ಎಂದರೇ ಅವರು ಹಿರಿಯ ನಾಗರೀಕರು ಅವರಿಗೆ ಕಿವಿ ಕೇಳುವುದಿಲ್ಲ ಎಂದು ಹೇಳುತ್ತಾರೆ. ಕ್ರಯದ ಕರಾರು ಪತ್ರವನ್ನು ನೋಂದಾಣಿ ಮಾಡಿಸಲು ತೊಂದರೆ ಇತ್ತ ಎಂದರೇ ಹೌದು ಹಣಕಾಸಿನ ಸಮಸ್ಯೆ ಇತ್ತು. ನೋಂದಾಣೆಗ 50000 ರಿಂದ 60000/- ಖರ್ಚು ಆಗುತ್ತಿತ್ತು ಅದನ್ನು ನಾವು ವಿಚಾರಿಸಿದ್ದೇನೆ ಆಗ 6ನೇ ಪ್ರತಿವಾದಿ ಬಂದಿದ್ದರು. 50000

ರಿಂದ 60000/- ಖರ್ಚು ಆಗುತ್ತದೆ ಎಂದು ಬಾಯಿ ಮಾತಿನಲ್ಲಿ ಹೇಳುತ್ತಾರೆ. ಕ್ರಯದ ಕರಾರು ಪತ್ರವನ್ನು ನೋಂದಾಣಿ ಮಾಡಿಸಲು 2000 ರಿಂದ 3000 ಖರ್ಚು ಆಗುತ್ತದೆ ಎಂದರೆ ಸುಳ್ಳು. ನೋಂದಾಣಿ ಆಗದ ಕರಾರು ಪತ್ರಕ್ಕೆ ಕಾನೂನಿನ ಮಾನ್ಯತೆ ಇಲ್ಲ ಎಂದರೆ ಸುಳ್ಳು.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದರಿಂದ ಮುಂದೂಡಲಾಯಿತು).**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**(ಸಾ.ಓ.ಹೇ.ಕೇ.ಸ.ಇ.ಎ.ಒ)**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು **ಜೆ.ಎಂ.ಎಫ್.ಸಿ., ಚನ್ನಪಟ್ಟಣ.**

**(**ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುವುದರಿಂದ ಮುಂದೂಡಲಾಯಿತು.**)**

ಯಾವುದೇ ದಾಖಲೆಗಳನ್ನು ಗುರುತಿಸಿಕೊಂಡಿರುವುದಿಲ್ಲ**.**

**(**ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರಿದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿರುವುದರಿಂದ ಮುಂದೂಡಲಾಯಿತು**)**

**(**ಈ ಹಂತದಲ್ಲಿ ಪ್ರತಿವಾದಿಯ ವಿರುದ್ಧ ಏಕತರ್ಫಿಯ ಆದೇಶ ಮಾಡಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**)**

**(**ಈ ಹಂತದಲ್ಲಿ ಪ್ರತಿವಾದಿ ಪ್ರತಿವಾದ ಪತ್ರವನ್ನು ಸಲ್ಲಿಸದ ಕಾರಣ ಹಾಗೂ ನ್ಯಾಯಾಲಯದ ಮುಂದೆ ಹಾಜರಾಗದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು. **)**